# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 262 | Pages. 2 | Date: 01-10-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 262 - ಪುಟಗಳು : 2 | 01-10-2026 ಗುರುವಾರ | Ph: 8762954248 | ದರ : ₹1


# ಕ್ಯಾತನಹಳ್ಳಿ ಏತ ನೀರಾವರಿ: ಕ್ರೆಡಿಟ್ ಜಟಾಪಟಿ

## ಹಾಲಿ–ಮಾಜಿ ಶಾಸಕರ ಸಮಾಗಮ | ಮೊಳಗಿದ ಪರಸ್ಪರ ಘೋಷಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲ್ಲೂಕಿನ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯಿಂದ ನೀರು ಹರಿಸುವ ವಿಚಾರ ಹಾಲಿ ಮತ್ತು ಮಾಜಿ ಶಾಸಕರ ನಡುವಿನ ರಾಜಕೀಯ ಪೈಪೋಟಿಗೆ ವೇದಿಕೆ ಕಲ್ಪಿಸಿಕೊಟ್ಟಿದೆ.

ರೈತರ ಹಲವು ವರ್ಷಗಳ ಬೇಡಿಕೆಯಾಗಿರುವ ಯೋಜನೆಗೆ ಮತ್ತೆ ಚಾಲನೆ ನೀಡುವ ಸಂದರ್ಭದಲ್ಲಿ ಯಾರು ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಬೇಕು ಎಂಬ ವಿಚಾರದಲ್ಲಿ ಶಾಸಕ ಎಚ್.ಪಿ. ಸ್ವರೂಪ್ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಅವರ ಬೆಂಬಲಿಗರ ನಡುವೆ ಪೈಪೋಟಿ ಕಂಡುಬಂದಿತು.

ಯಗಚಿ ಜಲಾಶಯದಿಂದ ತಾಲ್ಲೂಕಿನ 13 ಗ್ರಾಮಗಳ 21 ಕೆರೆಗಳಿಗೆ ನೀರು ಹರಿಸುವ ಉದ್ದೇಶದಿಂದ ರೂಪಿಸಲಾಗಿರುವ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ 2019ರ ವರೆಗೆ ಕಾರ್ಯನಿರ್ವಹಿಸಿತ್ತು. ಬಳಿಕ ಸುಮಾರು 1.89 ಕೋಟಿ ರೂ. ವಿದ್ಯುತ್ ಬಿಲ್ ಬಾಕಿ ಉಳಿದ ಹಿನ್ನೆಲೆಯಲ್ಲಿ ಯೋಜನೆ ಸ್ಥಗಿತಗೊಂಡಿತ್ತು. ಅದರಿಂದ ಯೋಜನೆಯ ವ್ಯಾಪ್ತಿಯ ರೈತರು ಹಲವು ವರ್ಷಗಳಿಂದ ನೀರಿಗಾಗಿ ಕಾಯುವಂತಾಗಿತ್ತು. ಯೋಜನೆಯ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಈ ಬಾರಿ ಕೆರೆಗಳಿಗೆ ನೀರು ಹರಿಸಬೇಕೆಂದು ರೈತರು ಒತ್ತಾಯಿಸಿದ್ದರು. ಸೆ. 30ರ ಒಳಗೆ ನೀರು ಹರಿಸದಿದ್ದರೆ ಹೋರಾಟ ತೀವ್ರಗೊಳಿಸುವ ಎಚ್ಚರಿಕೆಯನ್ನೂ ನೀಡಿದ್ದರು. ರೈತರ ಹೋರಾಟಕ್ಕೆ ಮಾಜಿ ಶಾಸಕ ಪ್ರೀತಂ ಗೌಡ ಅವರು ಧರಣಿ ಮೂಲಕ ಬೆಂಬಲ ವ್ಯಕ್ತಪಡಿಸಿದ್ದರು.



### ಬೆಂಬಲಿಗರ ಕ್ರೆಡಿಟ್ ವಾರ್

ವರ್ಷಗಳಿಂದ ಸ್ಥಗಿತಗೊಂಡಿರುವ ಯೋಜನೆ ಪುನರಾರಂಭವಾಗುತ್ತಿರುವುದು ರೈತರಲ್ಲಿ ನಿರೀಕ್ಷೆ ಮೂಡಿಸಿದೆ. ಆದರೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡುವ ವಿಚಾರದಲ್ಲಿ ಹಾಲಿ ಮತ್ತು ಮಾಜಿ ಶಾಸಕರ ನಡುವೆ ಕಂಡುಬಂದ ಪೈಪೋಟಿ ರಾಜಕೀಯ ಚರ್ಚೆಗೆ ಕಾರಣವಾಗಿದೆ. ಯೋಜನೆಯಿಂದ 13 ಗ್ರಾಮಗಳ 21 ಕೆರೆಗಳಿಗೆ ನೀರು ತಲುಪಿದರೆ ಕೃಷಿ ಹಾಗೂ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವಾಗಲಿದೆ ಎಂಬ ನಿರೀಕ್ಷೆ ರೈತರದ್ದಾಗಿದೆ. ಹೀಗಾಗಿ ಉದ್ಘಾಟನೆಯ ಕ್ರೆಡಿಟ್‌ಗಿಂತ ಯೋಜನೆ ನಿರಂತರವಾಗಿ ಕಾರ್ಯನಿರ್ವಹಿಸಿ ಕೆರೆಗಳಿಗೆ ಸಮರ್ಪಕವಾಗಿ ನೀರು ತಲುಪಬೇಕು ಎಂಬುದು ರೈತರ ಪ್ರಮುಖ ಆಶಯವಾಗಿದೆ.

ಹಾಲಿ-ಮಾಜಿ ಶಾಸಕರ ಜಟಾಪಟಿಯ ನಡುವೆ ನೀರಾವರಿ ಇಲಾಖೆ ಅಧಿಕಾರಿಗಳು ಪರಿಸ್ಥಿತಿ ನಿಭಾಯಿಸಲು ಹರಸಾಹಸಪಟ್ಟರು. ಅಂತಿಮವಾಗಿ ತಾಂತ್ರಿಕ ಸಮಸ್ಯೆ ನಿವಾರಿಸಿ ಸಾಂಕೇತಿಕ ನೀರು ಬಿಡುಗಡೆಗೆ ಚಾಲನೆ ನೀಡುವ ಕ್ಷಣಕ್ಕಾಗಿ ಸ್ಥಳದಲ್ಲಿ ಎರಡೂ ಬಣಗಳ ಬೆಂಬಲಿಗರು ಕಾದು ಕುಳಿತಿದ್ದರು. ಕೊನೆಗೆ ಶಾಸಕರು ನೀರು ಬಿಡುಗಡೆ ಮಾಡಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಮತ್ತೊಂದೆಡೆ, ಶಾಸಕ ಎಚ್.ಪಿ. ಸ್ವರೂಪ್ ಅವರು ವಿಧಾನಸಭೆಯಲ್ಲಿಯೂ ಯೋಜನೆಗೆ ಶೀಘ್ರ ಚಾಲನೆ ನೀಡಿ ನೀರು ಹರಿಸುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಬುಧವಾರ ಕ್ಯಾತನಹಳ್ಳಿ ಪಂಪ್‌ಹೌಸ್‌ನಲ್ಲಿ ಸಾಂಕೇತಿಕವಾಗಿ ನೀರು ಬಿಡುಗಡೆ ಮಾಡುವ ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿತ್ತು. ಹಾಲಿ ಶಾಸಕ ಎಚ್.ಪಿ. ಸ್ವರೂಪ್ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಇಬ್ಬರೂ ತಮ್ಮ ಬೆಂಬಲಿಗರೊಂದಿಗೆ ಸ್ಥಳಕ್ಕೆ ಆಗಮಿಸಿದ್ದರಿಂದ ಪಂಪ್‌ಹೌಸ್ ಸುತ್ತ ರಾಜಕೀಯ ಚಟುವಟಿಕೆ ಜೋರಾಯಿತು.

ಮಾಜಿ ಶಾಸಕ ಪ್ರೀತಂ ಗೌಡ ಅವರು ತಮ್ಮ ಬೆಂಬಲಿಗರೊಂದಿಗೆ ಪಂಪ್‌ಹೌಸ್ ಒಳಗೆ ತೆರಳಿ ಕುಳಿತಿದ್ದರೆ, ಶಾಸಕ ಸ್ವರೂಪ್ ಆರಂಭದಲ್ಲಿ ತಮ್ಮ ಬೆಂಬಲಿಗರೊಂದಿಗೆ ಪಂಪ್‌ಹೌಸ್ ಹೊರಭಾಗದಲ್ಲಿ ನಿಂತಿದ್ದರು. ನೀರು ಬಿಡುಗಡೆಗೆ ಚಾಲನೆ ನೀಡುವ ಬಟನ್ ಒತ್ತುವ ಅವಕಾಶ ಯಾರಿಗೆ ಸಿಗಬೇಕು ಎಂಬ ವಿಚಾರದಲ್ಲಿ ಎರಡೂ ಬಣಗಳ ನಡುವೆ ಪೈಪೋಟಿ ಕಂಡುಬಂದಿತು. ಈ ನಡುವೆ ವಿದ್ಯುತ್ ಸಂಪರ್ಕದಲ್ಲಿದ್ದ ತಾಂತ್ರಿಕ ಸಮಸ್ಯೆ ನಿವಾರಿಸಲು ಎಲೆಕ್ಟ್ರಿಷಿಯನ್‌ಗಳು ಹರಸಾಹಸಪಟ್ಟರು. ಇದರಿಂದ ನಿಗದಿತ ಸಮಯಕ್ಕೆ ನೀರು ಹರಿಸುವ ಕಾರ್ಯ ಆರಂಭವಾಗುವುದೇ ಎಂಬ ಕುತೂಹಲವೂ ರೈತರಲ್ಲಿ ಮೂಡಿತ್ತು.

**ಪುಷ್ಪಗಿರಿ ಸ್ವಾಮೀಜಿ ಮಧ್ಯಸ್ಥಿಕೆ:**

ಸಾಂಕೇತಿಕವಾಗಿ ನೀರು ಬಿಡುಗಡೆ ಮಾಡುವ ಕಾರ್ಯಕ್ರಮಕ್ಕೆ ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ ಆಗಮಿಸಿದರು. ಸ್ವಾಮೀಜಿ ಪಂಪ್‌ಹೌಸ್‌ಗೆ ಆಗಮಿಸಿದ ಬಳಿಕ ಶಾಸಕ ಸ್ವರೂಪ್ ಬಳಿಗೆ ತೆರಳಿ ಅವರೊಂದಿಗೆ ಕುಳಿತರು. ನಂತರ ಸ್ವಾಮೀಜಿ ಅವರು ಮಾಜಿ ಶಾಸಕ ಪ್ರೀತಂ ಗೌಡ ಅವರನ್ನು ಕರೆತಂದು ಇಬ್ಬರನ್ನೂ ಒಂದೇ ಕಡೆ ಕೂರಿಸಿದರು. ಕೊನೆಗೆ ಸ್ವಾಮೀಜಿ ಅಲ್ಲಿಂದ ವಾಪಸ್ ನಡೆದರು. ಈ ವೇಳೆ ಉಭಯ ನಾಯಕರ ಬೆಂಬಲಿಗರು ತಮ್ಮ ತಮ್ಮ ನಾಯಕರ ಪರವಾಗಿ ಜೈಕಾರ ಕೂಗಿ, ಶಿಳ್ಳೆ ಹಾಗೂ ಚಪ್ಪಾಳೆ ತಟ್ಟಿದ ಪರಿಣಾಮ ಸ್ಥಳದಲ್ಲಿ ಕೆಲಕಾಲ ರಾಜಕೀಯ ಉತ್ಸಾಹದ ವಾತಾವರಣ ನಿರ್ಮಾಣವಾಯಿತು.

# ಹಾಸನಾಂಬ ಮಹೋತ್ಸವ: ಹೆಚ್ಚಿನ ಪ್ರಚಾರಕ್ಕೆ ಸಂಸದರ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ರಾಷ್ಟ್ರ ಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡುವಂತೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಅ.29 ರಿಂದ ನ.11ರ ವರೆಗೆ ಜಾತ್ರೆ ನಡೆಯಲಿದ್ದು, ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಹಾಗೂ ಪ್ರವಾಸಿಗರು ಹಾಸನಕ್ಕೆ ಆಗಮಿಸುವ ನಿರೀಕ್ಷೆಯಿದೆ. ಈ ಹಿನ್ನೆಲೆ ಮಹೋತ್ಸವಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ತ್ವರಿತ ಪ್ರಚಾರ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಇನ್‌ಕ್ರೆಡಿಬಲ್ ಇಂಡಿಯಾ ಜಾಲತಾಣ ಹಾಗೂ ಅಧಿಕೃತ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಹಾಸನಾಂಬ ಮಹೋತ್ಸವದ ಕುರಿತು ಪ್ರಚಾರ ಕೈಗೊಳ್ಳಬೇಕು. ದೂರದರ್ಶನ, ಆಕಾಶವಾಣಿ ಸೇರಿ ಸರ್ಕಾರಿ ಪ್ರಚಾರ ಮಾಧ್ಯಮಗಳಲ್ಲಿಯೂ ಮಹೋತ್ಸವದ ಮಾಹಿತಿ ಪ್ರಸಾರ ಮಾಡಬೇಕು. ಇಂಗ್ಲೀಷ್, ಹಿಂದಿ ಹಾಗೂ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಪ್ರಚಾರ ಚಿತ್ರಗಳು ಮತ್ತು ಡಿಜಿಟಲ್ ಮಾಹಿತಿ ಸಿದ್ಧಪಡಿಸಿ ದೇಶದ ವಿವಿಧ ಭಾಗಗಳ ಪ್ರವಾಸಿಗರಿಗೆ ತಲುಪಿಸಬೇಕು. ರಾಷ್ಟ್ರೀಯ ಪ್ರವಾಸೋದ್ಯಮ ಸಂಸ್ಥೆಗಳು, ಪ್ರವಾಸ ನಿರ್ವಾಹಕರು ಹಾಗೂ ಮಾಧ್ಯಮಗಳ ಗಮನ ಸೆಳೆಯುವ ಮೂಲಕ ಮಹೋತ್ಸವವನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಹಾಸನಾಂಬೆ ದೇವಾಲಯವನ್ನು ಬೇಲೂರಿನ ಚನ್ನಕೇಶವ ದೇವಾಲಯ, ಹಳೇಬೀಡು ಹಾಗೂ ಶ್ರವಣಬೆಳಗೊಳದಂತಹ ಪ್ರಮುಖ ಪಾರಂಪರಿಕ ಮತ್ತು ಧಾರ್ಮಿಕ ಪ್ರವಾಸಿ ತಾಣಗಳೊಂದಿಗೆ ಸಂಯೋಜಿಸಿ ಆಧ್ಯಾತ್ಮಿಕ ಹಾಗೂ ಪಾರಂಪರಿಕ ಪ್ರವಾಸೋದ್ಯಮ ವಲಯವಾಗಿ ಅಭಿವೃದ್ಧಿಪಡಿಸುವ ಅವಕಾಶವಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಮೂಲಕ ವಿಶೇಷ ಪ್ರಚಾರ ಕಾರ್ಯತಂತ್ರ ರೂಪಿಸುವಂತೆ ಸಲಹೆ ನೀಡಿದ್ದಾರೆ.

ಮಹೋತ್ಸವಕ್ಕೆ ಕೆಲವೇ ದಿನಗಳು ಬಾಕಿ ಇರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಿ, ರಾಷ್ಟ್ರಮಟ್ಟದ ಪ್ರಚಾರಕ್ಕೆ ತ್ವರಿತ ಕ್ರಮ ಕೈಗೊಳ್ಳಬೇಕು. ಇದರಿಂದ ಹಾಸನಾಂಬೆ ಮಹೋತ್ಸವದ ಜೊತೆಗೆ ಜಿಲ್ಲೆಯ ಇತರ ಐತಿಹಾಸಿಕ, ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಿಗೂ ಹೆಚ್ಚಿನ ಪ್ರವಾಸಿಗರನ್ನು ಸೆಳೆಯಲು ಸಾಧ್ಯವಾಗಲಿದೆ ಎಂದಿದ್ದಾರೆ.

# ಪೌರ ಕಾರ್ಮಿಕರ ಸಮುದಾಯ ಭವನಕ್ಕೆ 10 ಲಕ್ಷ ರೂ.



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಪೌರ ಕಾರ್ಮಿಕರ ಸಮುದಾಯ ಭವನದ ಸಿಲಿಂಗ್, ವಿದ್ಯುತ್ ವ್ಯವಸ್ಥೆ ಸೇರಿ ಅಗತ್ಯ ಕಾಮಗಾರಿಗೆ ಮುಂದಿನ ಆರ್ಥಿಕ ವರ್ಷದಲ್ಲಿ ಪುರಸಭೆಯ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿ ಹೆಚ್ಚುವರಿಯಾಗಿ 10 ಲಕ್ಷ ರೂ. ಒದಗಿಸಲಾಗುವುದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ತಿಳಿಸಿದರು.

ಪಟ್ಟಣದ ರೇಣುಕಾ ನಗರ, ಬಸವನಕಟ್ಟೆ ಸಂತೆ ಮೈದಾನದಲ್ಲಿರುವ ಪೌರ ಕಾರ್ಮಿಕರ ಸಮುದಾಯ ಭವನದ ಉಳಿಕೆ ಕಾಮಗಾರಿ ಹಾಗೂ ಮರುನಿರ್ಮಾಣ ಕಾರ್ಯಕ್ಕೆ ಬುಧವಾರ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಕೊಳಚೆ ನಿರ್ಮೂಲನ ಮಂಡಳಿಯಿಂದ ಹಿಂದೆ ನಿರ್ಮಿಸಲಾಗಿದ್ದ ಸಮುದಾಯ ಭವನವನ್ನು ಪುರಸಭೆಯ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿ 30 ಲಕ್ಷ ರೂ. ವೆಚ್ಚದಲ್ಲಿ ನವೀಕರಿಸಲಾಗುತ್ತಿದೆ. ಪೌರಕಾರ್ಮಿಕರು ಹಾಗೂ ಸ್ಥಳೀಯ ನಾಗರಿಕರಿಗೆ ಶುಭ ಕಾರ್ಯ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗುವಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗುವುದು ಎಂದರು.

ಸಾರ್ವಜನಿಕರ ಅನುಕೂಲಕ್ಕಾಗಿ ಊಟದ ಹಾಲ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ. ನವೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಸಮುದಾಯ ಭವನದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಸುಸಜ್ಜಿತವಾಗಿ ನಡೆಸಲು ಅನುಕೂಲವಾಗಲಿದೆ. ಮುಂದಿನ ಹಂತದಲ್ಲಿ ಸಿಲಿಂಗ್, ವಿದ್ಯುತ್ ವ್ಯವಸ್ಥೆ ಸೇರಿ ಅಗತ್ಯ ಕಾಮಗಾರಿ ಕೈಗೊಳ್ಳಲಾಗುವುದು. ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಗುತ್ತಿಗೆದಾರ ಮತ್ತು ಅಧಿಕಾರಿಗಳಿಗೆ ಸೂಚಿಸದರು.

ಪುರಸಭೆ ಮುಖ್ಯಾಧಿಕಾರಿ ಸಿ.ಎಸ್. ಪ್ರಕಾಶ್, ಅಭಿಯಂತರರಾದ ಗಿರೀಶ್, ಬಸವರಾಜು, ಮಾಜಿ ಅಧ್ಯಕ್ಷೆ ರಾಣಿ ಕೃಷ್ಣ, ಮುಖಂಡರಾದ ಕೃಷ್ಣ, ಶಾಮಿಯಾನ ರಘು, ಗುತ್ತಿಗೆದಾರ ಅರ್ಥುರ್ ಖಾನ್ ಮತ್ತಿತರರಿದ್ದರು.

# ಗಾರ್ಮೆಂಟ್ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಮನವಿ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಗಾರ್ಮೆಂಟ್, ವಸ್ತ್ರ ಹಾಗೂ ಟೈಲರಿಂಗ್ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಕನಿಷ್ಠ ವೇತನ, ತುಟ್ಟಿ ಭತ್ಯೆ ಮತ್ತು ಇಪಿಎಫ್-ಇಪಿಎಸ್ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸುವಂತೆ ಸಂಸದ ಶ್ರೇಯಸ್ ಎಂ. ಪಟೇಲ್ ಅವರು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕಾರ್ಮಿಕರ ಅಹವಾಲು ಹಾಗೂ ಸಂಬಂಧಿತ ವರದಿಯನ್ನು ಸಚಿವರಿಗೆ ಸಲ್ಲಿಸಿರುವ ಸಂಸದರು, ಕರ್ನಾಟಕ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ ಗಾರ್ಮೆಂಟ್, ವಸ್ತ್ರ ಮತ್ತು ಟೈಲರಿಂಗ್ ಸಂಸ್ಥೆಗಳಿಗೆ ಅನ್ವಯಿಸುವ ಕನಿಷ್ಠ ವೇತನ ಹಾಗೂ ತುಟ್ಟಿ ಭತ್ಯೆಯನ್ನು ಪರಿಶೀಲಿಸುವಂತೆ ಕೋರಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕಾರ್ಮಿಕರು ಮತ್ತು ಉದ್ಯೋಗದಾತರ ಪ್ರತಿನಿಧಿಗಳನ್ನು ಒಳಗೊಳ್ಳುವಂತೆಯೂ ಮನವಿ ಮಾಡಿದ್ದಾರೆ.

ಸಂಬಂಧಿತ ಸಂಸ್ಥೆಗಳು ಅಧಿಸೂಚಿತ ಕನಿಷ್ಠ ವೇತನವನ್ನು ಪಾವತಿಸುತ್ತಿವೆಯೇ ಹಾಗೂ ಕಡ್ಡಾಯ ಇಪಿಎಫ್ ಕೊಡುಗೆಗಳನ್ನು ನಿಯಮಾನುಸಾರ ಜಮಾ ಮಾಡುತ್ತಿವೆಯೇ ಎಂಬುದನ್ನು ಅಧಿಕಾರಿಗಳ ಮೂಲಕ ಪರಿಶೀಲಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾರ್ಮಿಕರು ತಮ್ಮ ಯುಎಎನ್ ಮತ್ತು ಸೇವಾ ದಾಖಲೆಗಳನ್ನು ಪರಿಶೀಲಿಸಿಕೊಳ್ಳಲು ಹಾಗೂ ಬಾಕಿ ಕೊಡುಗೆ, ವರ್ಗಾವಣೆ ಮತ್ತು ಇತ್ಯರ್ಥಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಾಸನದಲ್ಲಿ ಇಪಿಎಫ್‌ಒ ಆಗುವ ವತಿಯಿಂದ ಕುಂದುಕೊರತೆ ಮತ್ತು ಹಕ್ಕುಪಾವತಿ ನೆರವು ಶಿಬಿರ ಆಯೋಜಿಸುವಂತೆ ಮನವಿ ಮಾಡಿದ್ದಾರೆ.

ಕಾರ್ಮಿಕರ ಪ್ರತಿನಿಧಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಭೇಟಿ ಮಾಡಿ, ಕೈಗೊಂಡ ಕ್ರಮಗಳ ಕುರಿತು ಲಿಖಿತ ಉತ್ತರ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ. ಕಾರ್ಮಿಕರ ಕುಟುಂಬಗಳ ಜೀವನೋಪಾಯಕ್ಕೆ ವೇತನ ಮತ್ತು ಶಾಸನಬದ್ಧ ಸೌಲಭ್ಯಗಳು ಪ್ರಮುಖ ಆಧಾರವಾಗಿರುವುದರಿಂದ, ಈ ವಿಷಯದಲ್ಲಿ ತುರ್ತಾಗಿ ಮಧ್ಯಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶ್ರೇಯಸ್ ಎಂ. ಪಟೇಲ್ ಅವರು ಸಚಿವರನ್ನು ಒತ್ತಾಯಿಸಿದ್ದಾರೆ.

# ಸಕಲೇಶಪುರ ಬರಪೀಡಿತ ತಾಲೂಕು ಎಂದು ಘೋಷಿಸಿ: ರೇವಣ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಸಕಲೇಶಪುರ ತಾಲೂಕನ್ನೂ ಬರಪೀಡಿತ ಎಂದು ಘೋಷಿಸಿ ಅಗತ್ಯ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಎಚ್.ಡಿ. ರೇವಣ್ಣ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ. ಜಿಲ್ಲೆಯಲ್ಲಿ ಹಲವು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಆದರೆ ಸಕಲೇಶಪುರ ತಾಲೂಕನ್ನು ಕೈಬಿಟ್ಟಿರುವುದು ಸರಿಯಲ್ಲ. ಮಳೆ ಕೊರತೆಯಿಂದ ಕಾಫಿ ತೋಟಗಳು ನಷ್ಟಕ್ಕೀಡಾಗುತ್ತಿವೆ. ಎರಡು-ಮೂರು ದಿನ ಮಳೆ ಬಾರದಿದ್ದರೂ ಕಾಫಿ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದರು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತುರ್ತಾಗಿ 2 ರಿಂದ 3 ಕೋಟಿ ರೂ.ಗಳನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಬೇಕು. ಅಗತ್ಯವಿರುವ ಕಡೆ ಬೋರ್‌ವೆಲ್, ಪೈಪ್ ಲೈನ್ ನಿರ್ಮಿಸಿ, ನೀರಿನ ಕೊರತೆ ಇರುವ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು ಎಂದು ಒತ್ತಾಯಿಸಿದರು.

ಜಾನುವಾರುಗಳಿಗೆ ಮೇವು ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತಿ ಕ್ಷೇತ್ರಕ್ಕೆ ಪ್ರತ್ಯೇಕವಾಗಿ 5 ಕೋಟಿ ರೂ. ನೀಡಬೇಕು. ಜಿಲ್ಲೆಯಲ್ಲಿ ಸುಮಾರು 2.20 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬೆಳೆ ನಷ್ಟವಾಗಿದ್ದು, ರೈತರು ಮಾಡಿದ ಖರ್ಚಿನ ಆಧಾರದ ಮೇಲೆ ಪರಿಹಾರ ನೀಡಬೇಕು. ಕೇವಲ 2.5 ಸಾವಿರ ರೂ. ಪರಿಹಾರ ನೀಡುವುದರಿಂದ ರೈತರಿಗೆ ಯಾವುದೇ ಪ್ರಯೋಜನವಿಲ್ಲ ಎಂದರು.



ರೈತರ ಸಂಕಷ್ಟ ನಿವಾರಿಸಲು ಸರ್ಕಾರ ಮತ್ತೊಮ್ಮೆ ಒನ್‌ಟೈಮ್ ಸಾಲಮನ್ನಾ ಮಾಡಬೇಕು. ಹಿಂದೆ ಜಿಲ್ಲಾ ಬ್ಯಾಂಕ್ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲಮನ್ನಾ ಮಾಡಲಾಗಿತ್ತು. ಅದೇ ರೀತಿ ಈಗಲೂ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ 80-85 ವರ್ಷದ ವೃದ್ಧರು, ವಿಧವೆಯರು ಹಾಗೂ ಅಂಗವಿಕಲರು 6ರಿಂದ 8 ತಿಂಗಳಿನಿಂದ ಪಿಂಚಣಿ ಸಿಗದೆ ಪರದಾಡುತ್ತಿದ್ದಾರೆ. ಪಿಂಚಣಿ ಹಣವೇ ಕೆಲವರಿಗೆ ಜೀವನಾಧಾರವಾಗಿದೆ. ಆದರೆ ಕಂದಾಯ ಇಲಾಖೆಯ ವಿಎ, ಆರ್‌ಐ ಹಾಗೂ ತಹಶೀಲ್ದಾರ್‌ಗಳು ಕಚೇರಿಯಲ್ಲಿ ಲಭ್ಯವಾಗುತ್ತಿಲ್ಲ ಎಂಬ ದೂರುಗಳಿವೆ ಎಂದು ಆರೋಪಿಸಿದರು.

ಜಿಲ್ಲಾಧಿಕಾರಿಗಳು ಪ್ರತಿದಿನ ಕನಿಷ್ಠ ನಾಲ್ಕು ಗಂಟೆಯಾದರೂ ಕಚೇರಿಯಲ್ಲಿ ಕುಳಿತು ಪಿಂಚಣಿ ಸೇರಿದಂತೆ ಜನರ ಬಾಕಿ ಕೆಲಸಗಳನ್ನು ಬಗೆಹರಿಸಬೇಕು. ಒಂದು ತಿಂಗಳೊಳಗೆ ಸಮಸ್ಯೆ ಪರಿಹರಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

2028ರ ವಿಧಾನಸಭಾ ಚುನಾವಣೆ ವರೆಗೆ ಎಲ್ಲರೂ ಸಾಮೂಹಿಕ ನಾಯಕತ್ವದಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಕುಮಾರಸ್ವಾಮಿ ನೇತೃತ್ವದ ಎನ್‌ಡಿಎ ಮೈತ್ರಿಕೂಟವನ್ನು ಗೆಲ್ಲಿಸುವ ಗುರಿಯೊಂದಿಗೆ ಕಾರ್ಯಕರ್ತರು ಸಂಘಟಿತರಾಗಬೇಕು ಎಂದು ರೇವಣ್ಣ ಕರೆ ನೀಡಿದರು.

ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಗಂಗಾಧರ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಶೇಖರಪ್ಪ, ಜಿಪಂ ಮಾಜಿ ಅಧ್ಯಕ್ಷೆ ವತ್ಸಲಾ ಶೇಖರಪ್ಪ, ತಾಲೂಕು ಜೆಡಿಎಸ್ ಅಧ್ಯಕ್ಷ ಚಂದ್ರಶೇಖರ್, ಜೆಡಿಎಸ್ ಮುಖಂಡ ಲಾಳನಕೆರೆ ಯೋಗೀಶ್, ಗಣೇಶ್, ಬಸವಲಿಂಗಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಊಪಿನಹಳ್ಳಿ ಗ್ರಾಮದಲ್ಲಿ ಆಹಾರ ಜಾಗೃತಿ ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

RAW ಕಾರ್ಯಕ್ರಮದ ಅಂಗವಾಗಿ ಕೃಷಿ ಮಹಾವಿದ್ಯಾಲಯ, ಹಾಸನದ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳ ವತಿಯಿಂದ ಊಪಿನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರಿಗೆ ಆಹಾರ ಕಲಬೆರಕೆ ಮತ್ತು ಆಹಾರ ಪ್ಯಾಕೇಜಿಂಗ್ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ. ವೇಣು ಹಾಗೂ ಡಾ. ಸತೀಶ್ ಅವರು ಆಹಾರ ಕಲಬೆರಕೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳು ಹಾಗೂ ಅದನ್ನು ಗುರುತಿಸುವ ವಿಧಾನಗಳ ಕುರಿತು ಮಾಹಿತಿ ನೀಡಿದರು.

ಆಹಾರ ಪದಾರ್ಥಗಳನ್ನು ಖರೀದಿಸುವಾಗ ಪ್ಯಾಕೆಟ್ ಮೇಲಿರುವ ತಯಾರಿಕಾ ದಿನಾಂಕ, ಅವಧಿ ಮುಕ್ತಾಯ ದಿನಾಂಕ, FSSAI ಗುರುತು, ಪದಾರ್ಥಗಳ ವಿವರ ಹಾಗೂ ಪ್ಯಾಕೇಜಿಂಗ್ ಸ್ಥಿತಿಗಳನ್ನು ಪರಿಶೀಲಿಸುವಂತೆ ಗ್ರಾಮಸ್ಥರಿಗೆ ತಿಳಿಸಲಾಯಿತು. ಕಲಬೆರಕೆ ಆಹಾರ ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಕುರಿತು ಸಹ ವಿವರಿಸಲಾಯಿತು.

ಕಾರ್ಯಕ್ರಮವು ಗ್ರಾಮಸ್ಥರಲ್ಲಿ ಸುರಕ್ಷಿತ ಆಹಾರ ಸೇವನೆ, ಗುಣಮಟ್ಟದ ಆಹಾರ ಆಯ್ಕೆ ಮತ್ತು ಸರಿಯಾದ ಪ್ಯಾಕೇಜಿಂಗ್ ಕುರಿತು ಅರಿವು ಮೂಡಿಸುವಲ್ಲಿ ಸಹಾಯಕವಾಯಿತು. ಕಾರ್ಯಕ್ರಮದಲ್ಲಿ ಊಪಿನಹಳ್ಳಿ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

# ರಸ್ತೆ ಬದಿ ಕಸ: ಸಿಸಿಟಿವಿ ಕ್ಯಾಮರಾ ಅಳವಡಿಕೆ

## ಪುರಸಭೆ ಸಾಮಾನ್ಯ ಸಭೆ | ಅಧ್ಯಕ್ಷ ಅಕ್ರಂ ಶರೀಫ್ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ಪ್ರಮುಖ ರಸ್ತೆಯ ಎಲ್ಲೆಂದರಲ್ಲಿ ಸಾರ್ವಜನಿಕರು ಕಸ ಎಸೆಯುತ್ತಿದ್ದು ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿ ಸೌಂದರ್ಯ ಕಾಪಾಡಲು ಕ್ರಮ ವಹಿಸಲಾಗುವುದು ಎಂದು ಪುರಸಭೆ ಅಧ್ಯಕ್ಷ ಅಕ್ರಂ ಶರೀಫ್ ಭರವಸೆ ನೀಡಿದರು.

ಪುರಸಭೆಯ ವೇಲಾಪುರಿ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲಾ 23 ವಾರ್ಡ್‌ಗಳಿಗೂ ಸಿಸಿಟಿವಿ ಕ್ಯಾಮರಾ ಅಳವಡಿಸುವ ಬದಲು ಅಗತ್ಯವಿರುವ ಪ್ರಮುಖ ಸ್ಥಳಗಳನ್ನು ಗುರುತಿಸಿ ಅಲ್ಲಿ ಮಾತ್ರ ಕ್ಯಾಮರಾ ಅಳವಡಿಸಲಾಗುವುದು. ಪುರಸಭೆಯಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆರು ಹೊಸ ಟಿಪ್ಪರ್ ಆಟೋಗಳು ಶೀಘ್ರದಲ್ಲೇ ಬರಲಿವೆ. ಅದರಿಂದ ಕಸ ಸಂಗ್ರಹಣೆಯಲ್ಲಿ ಮತ್ತಷ್ಟು ಸುಧಾರಣೆ ಸಾಧ್ಯವಾಗುತ್ತದೆಂದರು.

ಪುರಸಭೆ ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಂಡಿರುವ ಕೆಲ ಗುತ್ತಿಗೆದಾರರ ಕಾರ್ಯನಿರ್ವಹಣೆ ಸಮರ್ಪಕವಾಗಿಲ್ಲ ಎಂಬ ದೂರುಗಳಿವೆ. ಉಳಿದಿರುವ ಕೆಲವು ದಿನಗಳಲ್ಲಿ ಪಟ್ಟಣದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದರು.

ಸದಸ್ಯ ಜಗದೀಶ್ ಮಾತನಾಡಿ, ಹಲವು ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಕಸ ಸಂಗ್ರಹವಾಗುತ್ತಿದೆ. ಕಸ ಎಸೆಯುವವರ ಮೇಲೆ ನಿಗಾ ವಹಿಸಲು ಅಗತ್ಯವಿರುವ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಎಂದು ಮನವಿ ಮಾಡಿದರು.

ಸದಸ್ಯ ಕೆ.ಪಿ.ಶೈಲೇಶ್ ಮಾತನಾಡಿ, 23 ವಾರ್ಡ್‌ಗಳಿಗೆ ಕೇವಲ ಮೂರು ಟಿಪ್ಪರ್ ಇರುವದರಿಂದ ಸಮಸ್ಯೆಯಾಗುತ್ತಿದೆ ಎಂದರು.

ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ,



ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ, ಕಸ ಎಸೆಯುವ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿದರೆ ಜನರಲ್ಲಿ ಜಾಗೃತಿ ಮೂಡಿ ಕಸ ಹಾಕುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ ಎಂದರು.

**2.02 ಕೋ.ರೂ. ಅನುದಾನ:**

202627ನೇ ಸಾಲಿನ 16ನೇ ಹಣಕಾಸು ಯೋಜನೆಯಡಿ ಪುರಸಭೆಗೆ 2.02 ಕೋ.ರೂ. ಅನುದಾನ ಹಂಚಿಕೆಯಾಗಿದ್ದು, ಹೊಸ ಮಾರ್ಗಸೂಚಿಯಂತೆ ಯೋಜನೆ ರೂಪಿಸುವ ಕುರಿತು ಚರ್ಚಿಸಲಾಯಿತು.

ಸದಸ್ಯ ಜಮಾಲುದ್ದೀನ್ ಮಾತನಾಡಿ, ಸರ್ಕಾರದಿಂದ ಈಗಾಗಲೇ ವಿವಿಧ ಯೋಜನೆಗಳಡಿ ಅನುದಾನ ಬಿಡುಗಡೆಯಾಗಿದ್ದು, 23 ವಾರ್ಡ್‌ಗಳ ಹಲವು ಭಾಗಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಇನ್ನೂ ಎಷ್ಟು ಕಾಮಗಾರಿ ಬಾಕಿ ಉಳಿದಿವೆ ಎಂಬುದರ ಕುರಿತು ಸ್ಪಷ್ಟ ಮಾಹಿತಿ ನೀಡಬೇಕು. ಸದಸ್ಯರ ಅವಧಿ ಮುಕ್ತಾಯಗೊಳ್ಳುವ ಮುನ್ನ ಬಾಕಿ ಕಾಮಗಾರಿಗೆ ಚಾಲನೆ ನೀಡಬೇಕೆಂದು ಒತ್ತಾಯಿಸಿದರು.

ಮಾಜಿ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿ, ಕಳಪೆ ಕಾಮಗಾರಿ ನಡೆಸುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಕಾಮಗಾರಿ ನಡೆಯುವ ಸ್ಥಳಗಳಿಗೆ ಸಂಬಂಧಪಟ್ಟ ಇಂಜಿನಿಯರ್‌ಗಳು ಕಡ್ಡಾಯವಾಗಿ ಭೇಟಿ ನೀಡಿ ಕಾಮಗಾರಿಯ ಗುಣಮಟ್ಟ ಪರಿಶೀಲಿಸಬೇಕೆಂದರು.

**ಅನುಮತಿ ಇಲ್ಲದೆ ಶೆಡ್ ನಿರ್ಮಾಣ:**

ಎಪಿಎಂಸಿ ಸಮೀಪದ ಜಾಗದಲ್ಲಿ ಶೆಡ್ ನಿರ್ಮಾಣ ಮಾಡುತ್ತಿರುವ ಕುರಿತು ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಪ್ರಶ್ನಿಸಿದರು. ತಳ್ಳುಗಾಡಿಯಲ್ಲಿ ವ್ಯಾಪಾರ ನಡೆಸುತ್ತಿರುವ ಬಗ್ಗೆ ಮಾಹಿತಿ ಇದೆ ಎಂದು ಅಧ್ಯಕ್ಷ ಆಕ್ರಂ ಶರೀಫ್ ತಿಳಿಸಿದರು. ಆದರೆ ತಳ್ಳುಗಾಡಿಯಲ್ಲ, ಶೆಡ್ ನಿರ್ಮಾಣ ಮಾಡಲಾಗುತ್ತಿದೆ ಎಂದು ಸದಸ್ಯೆ ಸ್ಪಷ್ಟಪಡಿಸಿದರು. ಈ ಕುರಿತು ಪರಿಶೀಲಿಸಿ, ಪುರಸಭೆಯ ಅನುಮತಿ ಇಲ್ಲದೆ ಶೆಡ್ ನಿರ್ಮಿಸಿರುವುದು ಕಂಡುಬಂದರೆ ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

ಸಭೆಯಲ್ಲಿ ಪುರಸಭಾ ಉಪಾಧ್ಯಕ್ಷೆ ಉಷಾ ಸತೀಶ್, ಮುಖ್ಯಾಧಿಕಾರಿ ಬಸವರಾಜ ಶಿಗ್ಗಾವಿ, ಸದಸ್ಯರು ಹಾಗು ಅಧಿಕಾರಿಗಳು ಉಪಸ್ಥಿತರಿದ್ದರು.

### ಕುಡಿಯುವ ನೀರಿಗೆ ಅಪ್ಪಣೆ ಬೇಕೇ

ಪಟ್ಟಣದಲ್ಲಿ ಜನಸಂದಣಿ ಇರುವ ಸ್ಥಳಗಳಲ್ಲಿ ದಾನಿಗಳು ಮುಂದೆ ಬಂದರೆ, ಅಗತ್ಯವಿರುವ ಸ್ಥಳಗಳನ್ನು ಪುರಸಭೆಯಿಂದ ಗುರುತಿಸಿ ಬಸ್ ನಿಲ್ದಾಣಕ್ಕೆ ಅನುಮತಿ ನೀಡಲಾಗುವುದು ಎಂದು ಅಧ್ಯಕ್ಷ ಆಕ್ರಂ ಶರೀಫ್ ತಿಳಿಸಿದರು.

ಈ ಸಂದರ್ಭದಲ್ಲಿ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಹಿಂದೆ ತಹಶೀಲ್ದಾರ್ ಮಮತಾ ಅವರ ಮನವಿ ಮೇರೆಗೆ, ತಾಲೂಕು ಕಚೇರಿ ಮುಂಭಾಗ ನಿರ್ಮಿಸಲಾಗಿರುವ ಉಚಿತ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆಗೆ ಶಾಸಕರು ಅವಕಾಶ ಕಲ್ಪಿಸಿರಲಿಲ್ಲ. ವರ್ಷ ಕಳೆದರೂ ಉದ್ಘಾಟನೆಯಾಗದೆ ಇರುವ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ನೀರಿನ ಘಟಕವನ್ನು ಶೀಘ್ರ ಉದ್ಘಾಟಿಸಿ ಬಳಕೆಗೆ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದರು.

ಜನರಿಗೆ ಉಚಿತ ಶುದ್ಧ ಕುಡಿಯುವ ನೀರು ಒದಗಿಸುವ ಘಟಕವನ್ನು ಉದ್ಘಾಟಿಸಲು ಇಷ್ಟೊಂದು ವಿಳಂಬ ಏಕೆ. ಕುಡಿಯುವ ನೀರಿಗೆ ಯಾರ ಅಪ್ಪಣೆ ಬೇಕೆಂದು ಖಾರವಾಗಿ ಪ್ರಶ್ನಿಸಿದರು.

ಸದಸ್ಯ ಅಶೋಕ್ ಅವರು ಮಧ್ಯ ಪ್ರವೇಶಿಸಿ, ಅಡೆತಡೆ ಮಾಡಿರೋದು ಮಾಜಿ ಸಚಿವ ಬಿ.ಶಿವರಾಮ್ ಹೊರತು ಶಾಸಕರಲ್ಲ ಎಂದು ತಿರುಗೇಟು ನೀಡಿದರು. ಈ ವೇಳೆ ಇಬ್ಬರ ನಡುವೆ ಜೋರು ವಾಗ್ವಾದ ನಡೆಯಿತು.

# ಆಹಾರ ತಯಾರಿಕೆಯಲ್ಲಿ ಕೃತಕ ಬಣ್ಣ ಬಳಸಿದರೆ ಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ನಿಷೇಧಿಸಲಾಗಿರುವ ಕಲರ್ ಹಾಗೂ ಕೃತಕ ಬಣ್ಣ ಬಳಕೆ ಮಾಡದಂತೆ ತಾಲ್ಲೂಕು ಆಹಾರ ಸುರಕ್ಷತಾಧಿಕಾರಿ ಡಾ. ಬಿ.ಎಂ. ವಿಜಯ್ ಎಚ್ಚರಿಕೆ ನೀಡಿದರು.

ನಗರ ವ್ಯಾಪ್ತಿಯ ಹೋಟೆಲ್ ಮಾಲೀಕರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿ, ಅವಧಿ ಮುಗಿದ ಆಹಾರ ಪದಾರ್ಥಗಳನ್ನು ಬಳಸಬಾರದು. ಹೋಟೇಲ್ ಆವರಣದಲ್ಲಿ ಸಾಕಾಷ್ಟು ಗಾಳಿ, ಬೆಳಕು ಇರಬೇಕು. ತರಕಾರಿ, ಹಣ್ಣು, ಮೊಟ್ಟೆ ಮುಂತಾದ ಕೃಷಿ ಆಹಾರ ಉತ್ಪನ್ನಗಳು ಗುಣಮಟ್ಟವಾಗಿರುವುದನ್ನು ಬಳಸಬೇಕು. ಸಸ್ಯಹಾರಿ ಹಾಗೂ ಮಾಂಸಾಹಾರಿ ಬೇರೆ ಬೇರೆ ಸ್ಥಳದಲ್ಲಿ ತಯಾರಿಸಬೇಕು ಎಂದು ತಿಳಿಸಿದರು.

ಬಳಸುವ ಅಡುಗೆ ಎಣ್ಣೆಯನ್ನು ಪುನರಾವರ್ತನೆ ಮಾಡಬಾರದು. ಅಡುಗೆಗೆ ಬಳಸುವ ಪಾತ್ರೆಗಳನ್ನು ಸೊಂಕು ರಹಿತವಾಗಿ ಸ್ವಚ್ಛವಾಗಿಟ್ಟುಕೊಳ್ಳಬೇಕು. ಶುಚಿತ್ವ, ಗುಣಮಟ್ಟ ಆಹಾರ ಪದಾರ್ಥಗಳ ಬಳಕೆ, ಕಾರ್ಮಿಕರ ವೈಯಕ್ತಿಕ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ವೈದ್ಯಕೀಯ ಪ್ರಮಾಣ ಪತ್ರ ಪಡೆಯುವಂತೆ ಸೂಚನೆ ನೀಡಿದರು.

ಹೋಟೆಲ್‌ನಲ್ಲಿ ಕೀಟಗಳ ನಿಯಂತ್ರಣಕ್ಕೆ Pest Control ಮಾಡಿಸುವುದು ಇತರೆ ಯ First In First Out ಹಾಗೂ ಎಲ್ಲಾ ಆಹಾರ ವ್ಯಾಪಾರಿಗಳು ಕಡ್ಡಾಯವಾಗಿ ಆಹಾರ ಸುರಕ್ಷತೆಯಡಿ ನೊಂದಣಿ/ ಪರವಾನಗಿಯನ್ನು ಪಡೆಯಬೇಕು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ನಿಯಮ ಮತ್ತು ನಿಂಬಂಧನೆ 2011 ರ ಬಗ್ಗೆ ಹೋಟೆಲ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಯಿತು.

ಆರೋಗ್ಯ ನಿರೀಕ್ಷಣಾಧಿಕಾರಿ ಹೆಚ್.ಎಂ ಹಡಬಸವೇಗೌಡ ಅವರು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ದಂಡ ಮತ್ತು ಶಿಕ್ಷೆಯ ಬಗ್ಗೆ ಸವಿವರವಾಗಿ ಸಭೆಯಲ್ಲಿ ವಿವರಿಸಿ ತಿಳಿಸಿದರು.

ಸಭೆಯಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಶಿವರಾಮ್ ಹಾಗೂ ಹೋಟೆಲ್ ಮಾಲೀಕರು ಹಾಜರಿದ್ದರು.

# ಹಳೇ ದ್ವೇಷದಿಂದ ವ್ಯಕ್ತಿ ಮೇಲೆ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಜೈಲಿನಲ್ಲಿದ್ದಾಗ ಬೇರೆಯವರಿಗೆ ಬೆಂಬಲಿಸಿದ ಎಂಬ ದ್ವೇಷದಿಂದ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದ ಗರುಡನಗಿರಿ ರಸ್ತೆಯಲ್ಲಿ ಮಂಗಳವಾರ ನಡೆದಿದೆ.

ತಾಲ್ಲೂಕಿನ ಕೆರೆಹಳ್ಳಿಯ ಸಂಜಯ್ ನಾಯ್ಕ್ ಎಂಬುವವರ ಮೇಲೆ ನಗರದ ಪಾಣಿ ಎಂಬಾತ ಹಲ್ಲೆ ಮಾಡಿದ್ದಾನೆ ಎನ್ನಲಾಗಿದೆ.

ಡೆಕೋರೇಷನ್ ಕೆಲಸ ಮಾಡಿಕೊಂಡಿರುವ ಸಂಜಯ್‌ಗೆ ಪಾಣಿ ಹಲವು ವರ್ಷಗಳಿಂದ ಸ್ನೇಹಿತ. ಅಪರಾಧ ಪ್ರಕರಣದಡಿ ಜೈಲು ಪಾಲಾಗಿದ್ದ ಪಾಣಿ ಇತ್ತೀಚೆಗೆ ಬಿಡುಗಡೆಯಾಗಿದ್ದ. ಕಾರಾಗೃಹದಲ್ಲಿದ್ದಾಗ ತನ್ನ ಬೆಂಬಲಕ್ಕೆ ನಿಲ್ಲದೆ ಬೇರೆಯವರ ಜೊತೆ ಓಡಾಡಿಕೊಂಡಿದ್ದನೆಂದು ಸಂಜಯ್ ಮೇಲೆ ದ್ವೇಷ ಸಾಧಿಸುತ್ತಿದ್ದ. ಮಂಗಳವಾರ ಮಧ್ಯಾಹ್ನ ಬೈಕ್‌ನಲ್ಲಿ ಸಂಜಯ್ ಹೋಗುತ್ತಿದ್ದಾಗ ಅಡ್ಡಹಾಕಿ ತಡೆದ ಪಾಣಿ ಹಾಗೂ ಇನ್ನೊಬ್ಬ ಅದೇ ವಿಚಾರ ಪ್ರಸ್ತಾಪಿಸಿ ಜಗಳ ಶುರು ಮಾಡಿದ್ದಾನೆ. ನಂತರ ಕೈಯಲ್ಲಿದ್ದ ಚಾಕುವಿನಿಂದ ಬೆನ್ನಿಗೆ ಇರಿದಿದ್ದಾನೆ. ತೀವ್ರ ಅಸ್ವಸ್ಥಗೊಂಡ ಸಂಜಯ್ ಕುಸಿದು ಬೀಳುತ್ತಿದ್ದಂತೆ ಅಲ್ಲಿಂದ ಪರಾರಿಯಾಗಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅ.11ರಂದು ಕುರುಬ ಸಂಘದಿಂದ ಪ್ರತಿಭಾ ಪುರಸ್ಕಾರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ರಾಮನಾಥಪುರದಲ್ಲಿ ಅ. 11ರಂದು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕುರುಬರ ಸಂಘದ ಕಾರ್ಯದರ್ಶಿ ಮುತ್ತಿಗೆ ರಮೇಶ್ ತಿಳಿಸಿದರು.

ತಾಲೂಕು ಕನಕ ನೌಕರರ ಸಂಘ, ತಾಲೂಕು ಕುರುಬರ ಸಂಘ, ಶ್ರೀ ರೇವಣ್ಣ ಸಿದ್ದೇಶ್ವರ ಸಂಘ ಹಾಗೂ ಹಾಲುಮತ ಮಹಾಸಭಾ ಸಹಯೋಗದಲ್ಲಿ ರಾಮನಾಥಪುರ ಕನಕ ಸಮುದಾಯ ಭವನದಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ರವೀಂದ್ರ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಎ. ಮಂಜು ಉದ್ಘಾಟಿಸಲಿದ್ದು ಸಂಸದ ಶ್ರೇಯಸ್ ಪಟೇಲ್ ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ತಾಲೂಕು ಕನಕ ನೌಕರರ ಸಂಘದ ಕಾರ್ಯದರ್ಶಿ ಕೆ.ಜಿ. ಮೊಗಣ್ಣಗೌಡ ಮಾತನಾಡಿ, ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಎಲ್ಲ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವ ಧನ ನೀಡಲಾಗುವುದು. ವೃತ್ತಿಪರ ಕೋರ್ಸ್ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದರು.

ಶ್ರೀ ರೇವಣ್ಣ ಸಿದ್ದೇಶ್ವರ ಸಂಘದ ಅಧ್ಯಕ್ಷ ಶಶಿಕುಮಾರ್, ಹಾಲುಮತ ಮಹಾಸಭಾ ಅಧ್ಯಕ್ಷ ಕೃಷ್ಣೇಗೌಡ ಗೋಷ್ಠಿಯಲ್ಲಿದ್ದರು.

# ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಇಂಜಿನಿಯರ್ ಸತ್ಯನಾರಾಯಣ ಅಮಾನತು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಆರೋಪದಡಿ ಮಹಾನಗರ ಪಾಲಿಕೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಂ.ಸಿ.ಸತ್ಯನಾರಾಯಣ ಅವರನ್ನು ಸೇವೆಯಿಂದ ಅಮಾನುಗೊಳಿಸಲಾಗಿದೆ.

ಮಾ. 5ರಂದು ಸತ್ಯನಾರಾಯಣ ಅವರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು ಜಿಲ್ಲಾ ನ್ಯಾಯಾಲಯಕ್ಕೆ ಶೋಧನಾ ವಾರೆಂಟ್ ಪಡೆದಿದ್ದರು. ದಾಳಿ ವೇಳೆ ಆದಾಯಕ್ಕಿಂತ ಶೇ. 214 ರಷ್ಟು ಅಧಿಕ ಆಸ್ತಿ ಇರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಇನ್ನು ಕೆಲವು ಮಾಹಿತಿ ವಿಚಾರಣೆಯಿಂದ ತಿಳಿದು ಬರಬೇಕಿದ್ದು ಅಧಿಕಾರಿಯು ಆರ್ಥಿಕ ಮತ್ತು ರಾಜಕೀಯವಾಗಿ ಪ್ರಭಾವಶಾಲಿಯಾಗಿದ್ದಾರೆ.



ಪ್ರಕರಣದ ತನಿಖೆಗೆ ಅಡ್ಡಿ ಮತ್ತು ಹಸ್ತಕ್ಷೇಪ, ಸಾಕ್ಷಿ ನಾಶಪಡಿಸುವ ಸಾಧ್ಯತೆಯಿರುವ ಹಿನ್ನಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10ರ ಅಡಿ ಸೇವೆಯಿಂದ ಅಮಾನುಗೊಳಿಸಲಾಗಿದೆ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ತಿಳಿಸಿದ್ದಾರೆ.

ಏಳು ತಿಂಗಳ ಹಿಂದೆ ಲೋಕಾಯುಕ್ತ ಅಧಿಕಾರಿಗಳು ಸತ್ಯನಾರಾಯಣ ಅವರ ಹಾಸನದ ರವೀಂದ್ರ ನಗರದ ನಿವಾಸ, ಬೆಂಗಳೂರಿನ ಸದಾಶಿವ ನಗರದ 2 ಮನೆ, ಅವರ ಒಡೆತನದ ಬೇಲೂರು ರಸ್ತೆಯ ಪಾಂಡಿತ್ಯ ಎಜುಕೇಷನ್ ಟ್ರಸ್ಟ್, ರವೀಂದ್ರ ನಗರ ಹಾಗೂ ಚನ್ನಪಟ್ಟಣ ಬಡಾವಣೆಯ ಯುರೋ ಕಿಡ್ಸ್ ಶಾಲೆ ಹಾಗೂ ಮಹಾನಗರ ಪಾಲಿಕೆ ಕಚೇರಿ ಮೇಲೆ ದಾಳಿ ನಡೆಸಿ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದರು.

ಪ್ರಾಥಮಿಕ ತನಿಖೆಯಲ್ಲಿ ಅಧಿಕಾರಿಯು 7,50,40,013 ರೂ. (ಶೇ. 214) ಅಕ್ರಮ ಆಸ್ತಿ ಹೊಂದಿರುವುದು ತಿಳಿದುಬಂದಿದೆ. ಸರ್ಕಾರಿ ಸೇವೆಯ ವರಮಾನಕ್ಕಿಂತ ಹೆಚ್ಚಿನ ಮೊತ್ತದ ಆಸ್ತಿ ಇರುವುದು ಕಂಡುಬಂದಿದೆ ಎಂದು ಲೋಕಾಯುಕ್ತ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಇತಿಹಾಸದಲ್ಲಿ ಈ ದಿನ

### ಅಕ್ಟೋಬರ್-01

1854: ಭಾರತದಲ್ಲಿ ಅಂಚೆ ಚೀಟಿ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳಾಗಿದ್ದು, ದೇಶವ್ಯಾಪಿ ಅಂಚೆ ಸೇವೆ ವಿಸ್ತರಣೆಗೆ ವೇಗ ದೊರೆಯಿತು.

1953: ಭಾಷಾವಾರು ರಾಜ್ಯಗಳ ರಚನೆಯ ಪ್ರಮುಖ ಹಂತವಾಗಿ ಆಂಧ್ರ ರಾಜ್ಯ ಅಸ್ತಿತ್ವಕ್ಕೆ ಬಂತು. ಮದ್ರಾಸ್ ರಾಜ್ಯದಿಂದ ತೆಲುಗು ಭಾಷಿಕ ಪ್ರದೇಶಗಳನ್ನು ಪ್ರತ್ಯೇಕಿಸಲಾಯಿತು.

1956: ರಾಜ್ಯಗಳ ಪುನರ್ ವ್ಯವಸ್ಥೆ ಕಾಯ್ದೆಯ ಅನ್ವಯ ಭಾರತದಲ್ಲಿ ಹಲವು ರಾಜ್ಯಗಳ ಗಡಿಗಳು ಮತ್ತು ಆಡಳಿತಾತ್ಮಕ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆ ಜಾರಿಗೆ ಬಂತು.

1994: ಭಾರತದಲ್ಲಿ ರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಗಳ ದಿನ ಸೇರಿ ವಿವಿಧ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳಿಗೆ ಅಕ್ಟೋಬರ್ ತಿಂಗಳ ಆರಂಭವನ್ನು ಬಳಸುವ ಪರಿಪಾಠ ಬಲಗೊಂಡಿತು.

1946: ನ್ಯೂರೆಂಬರ್ಗ್ ವಿಚಾರಣೆಯಲ್ಲಿ ನಾಜಿ ಜರ್ಮನಿಯ ಪ್ರಮುಖ ನಾಯಕರ ವಿರುದ್ಧ ತೀರ್ಪು ಪ್ರಕಟಿಸಲಾಯಿತು.

1991: ಪಶ್ಚಿಮ ಬ್ಲಾಕ್ ಮತ್ತು ಸೋವಿಯತ್ ಪ್ರಭಾವದ ನಡುವೆ ನಡೆದ ಶೀತಲ ಸಮರದ ಅಂತ್ಯದ ಅವಧಿಯಲ್ಲಿ ಹಲವು ಪೂರ್ವ ಯುರೋಪಿಯನ್ ರಾಷ್ಟ್ರಗಳಲ್ಲಿ ರಾಜಕೀಯ ಬದಲಾವಣೆಗಳು ಮುಂದುವರಿದವು.

**ಜನನ**

1924: ಜಿಮ್ಮಿ ಕಾರ್ಟರ್, ಅಮೆರಿಕದ ಮಾಜಿ ಅಧ್ಯಕ್ಷ

1930: ರಿಚರ್ಡ್ ಹ್ಯಾರಿಸ್, ಪ್ರಸಿದ್ಧ ಐರಿಷ್ ನಟ ಮತ್ತು ಗಾಯಕ

**ನಿಧನ**

1979: ಭಾರತದ ಪ್ರಮುಖ ಸಮಾಜವಾದಿ ನಾಯಕ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಜಯಪ್ರಕಾಶ್ ನಾರಾಯಣ

# ಫಿಕ್ಸ್‌ಗೇನೆ ಮಾಡ್ಕಂಬಿಟ್ಟೆ -1

**– ಧನಂಜಯ ಜೀವಾಳ**

**ಗ್ರಾಮಾಯಣ - 2**

ಸಾರ್ಗೋಡಿನ ಸಿದ್ಧರಾಜೂನ ಜೈಲಿಗ್ಹಾಕ್ಯಾರಂತೆ ಎಂಬ ಸುದ್ದಿ ಪೇಟೆಯಾದ್ಯಂತ ಹರಿದಾಡತೊಡಗಿತ್ತು. ಈ ಸಿದ್ಧರಾಜು ಸುಮಾರು ಇನ್ನೂರೆಕರೆ ಕಾಫಿ ತೋಟವನ್ನ ಸ್ಥಳೀಯರಿಂದ ಕೊಂಡು, ಸಾಗುವಳಿ ಮಾಡಿಕೊಂಡಿದ್ದ. ಅಗ ಸಾಧಾರಣ ಉಸ್ತುವಾರಿಯಿದ್ದ ಕಾಫಿತೋಟ ಎಕರೆಗೆ ಇಪ್ಪತ್ತರಿಂದ ಇಪ್ಪತ್ತೈದು ಸಾವಿರದವರೆಗೂ ಮಾರಾಟವಾಗುತಿತ್ತು. ಅದೆಲ್ಲೋ ಬಾಳೆಹೊನ್ನೂರಿನ ತನ್ನ ಪಿತ್ರಾರ್ಜಿತ ಅರವತ್ತೆಕರೆ ತೋಟ ಹಾಗೂ ಮನೆಯನ್ನು ಮಾರಿ, ಅದೇ ಬಂಡವಾಳದಲ್ಲಿ ಈ ಇನ್ನೂರೆಕರೆ ತೋಟವನು ಕೊಂಡ ಸಿದ್ಧರಾಜುಗೆ ಕಡಿಮೆ ಬೆಲೆಯಲ್ಲಿ ಕೊಂಡ ತೋಟದ ಖುಷಿ ಹೆಚ್ಚು ದಿನ ಉಳಿಯಲಿಲ್ಲ. ಇಡೀ ಊರಿನ ಹತ್ತಿರಹತ್ತಿರ ಎಂಟುನೂರಕ್ಕೂ ಹೆಚ್ಚಿದ್ದ ಎಮ್ಮೆದನಗಳು ಈತ ಕೊಂಡ ತೋಟವನ್ನೇ ಹುಟ್ಟಿದಾಗಿಂದ ತಮ್ಮ ಅಭಯಾರಣ್ಯ ಮಾಡಿಕೊಂಡಿದ್ದವು. ಬೇಲಿ ದುರಸ್ತಿ ಮಾಡಿಯಾಯಿತು, ಕೂಲಿಕೊಟ್ಟು ಜನರಿಂದ ಆ ಹಿಂಡು ಹಿಂಡು ದನಗಳಲ್ಲಿ ಕೆಲವನ್ನು ಹಿಡಿಸಿ ದೊಡ್ಡಿಗೆ ಹೊಡೆದೂ ಆಯಿತು. ಎಲ್ಲಿಂದಲೋ ತಮ್ಮೂರಿಗೆ ಬಂದು ತೋಟ ಖರೀದಿಸಿದವನ ಬಗ್ಗೆ ಆ ಊರಿನಲ್ಲಿಯೇ ಕೆಲವರಿಗೆ ಅಸಮಾಧಾನವಿತ್ತು. ತೋಟಕ್ಕೆ ನುಗ್ಗುತಿದ್ದ ದನಗಳ ಕುರಿತು ಸುತ್ತಮುತ್ತಲಿನ ಗ್ರಾಮಸ್ಥರಿಗೂ ಸಿದ್ಧರಾಜುವಿಗೂ ಜಟಾಪಟಿ ಶುರೂವಾಯಿತು. ಮೊದಲೇ ಹರಕುಬಾಯಿಯ ಸಿದ್ಧರಾಜು ಈ ಕೊನೆಮೊದಲಿಲ್ಲದ ಕಿರುಕುಳದಿಂದ ಸಿಟ್ಟಿಗೆದ್ದು ಅದೊಂದು ದಿನ ತೋಟದೊಳಗೆ ದನ ನುಗ್ಗಿಸುತಿದ್ದ ರೈತರೊಂದಿಗೆ ಬಾಯಿಗೆ ಬಂದಂತೆ ಬೈದಾಡತೊಡಗಿದ. ಮಾತಿಗೆ ಮಾತು ಬೆಳೆದು ರೈತರು ಕತ್ತಿ ಹಿಡಿದು ಈತನನ್ನು ಬೆರಸಾಡಿಬಿಟ್ಟರು. ಮನೆಯೊಳಕ್ಕೆ ಓಡಿಹೋದ ಸಿದ್ಧರಾಜು ತನ್ನ ಡಬಲ್ ಬ್ಯಾರಲ್ ತೋಟಾಕೋವಿಯನ್ನು ತಂದು ಎರಡು ಈಡು ಆಕಾಶದೆಡೆಗೆ ಹಾರಿಸಿಯೇಬಿಟ್ಟ. ರೈತಸಂಘದ



ಹೋರಾಟ ಉತ್ತುಂಗದಲ್ಲಿದ್ದ ದಿನಗಳವು. ನಾಲ್ಕೈದೆಕರೆಯ ಸಣ್ಣ ರೈತರುಗಳಿಗೂ ಸರ್ಕಾರೀ ವ್ಯವಸ್ಥೆಯೊಳಗಿನ ಅಧಿಕಾರಿಗಳೊಂದಿಗೆ ಸದಾ ಸಖ್ಯದಲ್ಲಿಯೇ ಇರುತಿದ್ದ ದೊಡ್ಡ ಬೆಳೆಗಾರರಿಗೂ ನಡುವೆ ಕಂಡೂ ಕಾಣದಂತೆ ಸದ್ದಿಲ್ಲದೇ ಸರಿದಾಡುತಿದ್ದ ವೈಮನಸ್ಸು ಈ ಆಗಸಕ್ಕೆ ಹಾರಿದ ಎರಡು ಗುಂಡುಗಳಿಂದ ತಾರಕಕ್ಕೇರಿತು. ದೂರು, ಪ್ರತಿದೂರುಗಳು ದಾಖಲಾದವು. ತನ್ನದೇನೂ ತಪ್ಪಿಲ್ಲದಿದ್ದರೂ ಸಿದ್ಧರಾಜು ಎಲ್ಲರ ಮುಂದೆ ಕ್ಷಮೆ ಕೇಳಬೇಕಾಗಿ ಬಂತು.

ಹಲಸಿನಹಣ್ಣು ತಿನ್ನಲು ತೋಟದೊಳಗೆ ನುಗ್ಗುತಿವೆ ಎಂದು ತಿಳಿದು, ಕೂಲಿಕೊಟ್ಟು ತೋಟದಲ್ಲಿದ್ದ ಸರಿ ಸುಮಾರು ನಾನೂರೈವತ್ತಕ್ಕೂ ಹೆಚ್ಚು ಹಲಸಿನ ಮರಗಳಿಂದ ಹಣ್ಣು ಕಾಯಿ ಎನ್ನದೇ ಎಲ್ಲವನ್ನೂ ಕೀಳಿಸಿ ಪಕ್ಕದಲ್ಲೇ ಹರಿಯುತಿದ್ದ ಜಪಾವತಿ ನದಿಗೆ ಸುರಿಸಿಬಿಟ್ಟ. ಆದರೂ ಆ ತೋಟವನ್ನೇ ತಮ್ಮ ಆಜನ್ಮ ವಸಾಹತುವನ್ನಾಗಿ ಮಾಡಿಕೊಂಡಿದ್ದ ಆ ಎಮ್ಮೆದನಗಳು ಇಲ್ಲಿಯವರೆಗೂ ಅನೂಚಾನವಾಗಿ ನಡೆಸಿಕೊಂಡುಬಂದಿದ್ದ ಲೂಟಿಯನ್ನು ನಿಲ್ಲಿಸಲೇ ಇಲ್ಲ. ರೋಸಿಹೋದ ಸಿದ್ಧರಾಜು ದೆಬ್ರಳ್ಳಿ ಅಜೀಜ್ ಸಾಬರ ಮಗ, 'ಬಾಬರ್‌ಗೆ ಫಿಕ್ಸ್‌ಗೇನೆ ಮಾಡ್ಕಂಬಿಟ್ಟೆ' ರಾತ್ರೋರಾತ್ರಿ ಹತ್ತು ಲಾರಿಗಳನ್ನು ತರಿಸಿ, ಲಾರಿ ತುಂಬ ಇನ್ನೂರಕ್ಕೂ ಹೆಚ್ಚು ಎಮ್ಮೆ ದನಗಳನ್ನು ತುಂಬಿಸಿ, ಕೇರಳದ ಕಣ್ಣೂರಿಗೆ ಪಾರ್ಸೆಲು ಮಾಡಿಬಿಟ್ಟ. ಊರಿಂದ ಊರಿಗೆ ಬಂದು ತೋಟ ಕೊಂಡ ಪ್ರಮಾದಕ್ಕೆ ಸಿದ್ಧರಾಜು ಎಂದೂ ಕೊನೆಯಾಗದ ಯುದ್ಧಮೊಂದಕ್ಕೆ ಅನಿವಾರ್ಯವಾಗಿ ಸಜ್ಜಾಗಿಯೇಬಿಟ್ಟ. ಈ ಸಿದ್ಧರಾಜು ತಮ್ಮ ದನಗಳನ್ನು ಕೇರಳಕ್ಕೆಲ್ಲೋ ಎಕ್ಸ್ಪೋರ್ಟು ಮಾಡಿದ್ದಾನೆಂದು ಖಚಿತ ಮಾಡಿಕೊಂಡ ಊರ ಜನ ರಾತ್ರೋರಾತ್ರಿ ಅವನ ಮನೆಗೆ ಬೆಂಕಿ ಇಟ್ಟರು. ಹಾಗೂಹೀಗೂ ಮಾಡಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲಿಯೇ ತಪ್ಪಿಸಿಕೊಂಡ ಸಿದ್ಧರಾಜು ಆ ಕತ್ತಲಲ್ಲೇ ಜನರೆಡೆಗೆ ತನ್ನಲ್ಲಿದ್ದ ತೋಟಾದ ಚೀಲ ಖಾಲಿಯಾಗುವವರೆಗೂ ಅಂಧಾದುಂದಿ ಉಢಾಯಿಸಿಬಿಟ್ಟ. ಗ್ರಾಮಸ್ಥರ ಕಡೆಯಿಂದಲೂ ಹತ್ತಾರು ಗುಂಡುಗಳು ಹಾರಿದವು. ಕೂಗಾಟ ಚೀರಾಟಗಳು ಆ ಕಾಳರಾತ್ರಿಯಿಡೀ ಊರತುಂಬೆಲ್ಲಾ ಚೆಲ್ಲಾಡಿಹೋದವು. ಸಿದ್ಧರಾಜು ಕಡೆಯಿಂದ ಹಾರುತಿದ್ದ ಗುಂಡಿನ ದನಿ ನಿಂತುಹೋದ ಮೇಲೆ, ಸರಿಯಾದ ಆಯಕ್ಕೇ ತಾವು ಹಾರಿಸಿದ ಗುಂಡಿನ ಪೆಟ್ಟುತಿಂದು ಆತನೆಲ್ಲೋ ತೋಟದೊಳಗೆ ಮಗುಚಿ ಬಿದ್ದಿರಬಹುದೆಂದು ಆತನನ್ನು ಆ ಕತ್ತಲಲ್ಲಿ ಹುಡುಕುವ ಗೋಜಿಗೂ ಹೋಗದೇ, ತಮ್ಮ ಕಡೆಯಲ್ಲಿ ಪೆಟ್ಟು ಬಿದ್ದು ಅಪಾಯದ ಸ್ಥಿತಿಯಲ್ಲಿದ್ದವರನ್ನು ಆಸ್ಪತ್ರೆಗೆ ಸಾಗಿಸುವ ಕೆಲಸದಲ್ಲಿ ನಿರತರಾದರು. ಇತ್ತ ಮಳೆಯಲ್ಲಿ ನೆನೆದು ತೊಪ್ಪೆಯಾಗಿದ್ದ ಸಿದ್ಧರಾಜು, ಜನರ ಕೈಗೆ ಸಿಕ್ಕಿದರೆ ಬದುಕಲಾರೆನೆಂದು ತಿಳಿದು, ಸೀದಾ ಕಾಫಿಕಣದ ಪಕ್ಕ ಇದ್ದ ಸ್ಟೋರ್ ರೂಮಿಗೆ ಹೋದವನೇ ಅಲ್ಲಿ ಹಣ್ಣು ಆಗಲು ಇಟ್ಟಿದ್ದ ಕರಿಬಾಳೆಯ ಗೊನೆಯನ್ನು ತಂದವನೇ, ಅರೇಬಿಕಾ ಕಾಫಿ ಗಿಡಗಳ ಕಾಂಡಕ್ಕೆ ಸವರಲು ಇಟ್ಟಿದ್ದ ನಂಜುನಾಶಕ ಔಷದಿಯನ್ನು ಪ್ರತಿ ಹಣ್ಣಿನ ಒಳಕ್ಕೂ ಚಾಕಿನ ಸಹಾಯದಿಂದ ತೂರಿಸಿ, ತೋಟದ ವಿವಿದೆಡೆ ಎಸೆಯುತ್ತಾಹೋದ.

ಬೆಳಕ್ಹರಿಯಿತು, ಮಳೆಯೂ ಒಂದಷ್ಟು ಕಡಿಮೆಯಾಗಿತ್ತು. ರಾತ್ರಿ ಸುರಿಯುತ್ತಿದ್ದ ಆ ಮಹಾಮಳೆಯ ಸಮಯದಲ್ಲಿ ತಮ್ಮ ಗುಂಡೇಟಿಗೆ ಸಿಕ್ಕಿ ಹತನಾದವನ ಹೆಣವನ್ನು ತೋಟವಿಡೀ ಹುಡುಕುತ್ತಾ ಹೊರಟವರಿಗೆ ಕಣ್ಣು ಹಾಯಿಸಿದಲ್ಲೆಲ್ಲಾ ಕಾಣುತಿದ್ದುದು, ಆ ಮಳೆಗಾಳಿಗೆ ಗೊಗ್ಗರವಾದ ತಮ್ಮ ನಾಲ್ಕೂ ಕಾಲುಗಳನ್ನು ಚಾಚಿಕೊಂಡು, ಹೊಟ್ಟೆ ಉಬ್ಬರಿಸಿಕೊಂಡು ಸತ್ತು ಬಿದ್ದಿದ್ದ ನೂರಾರು ಎಮ್ಮೆದನಗಳು! ಮನೆ ಸುಟ್ಟ ಜನಗಳ ಮೇಲಿನ ಆಕ್ರೋಶಕ್ಕೆ, ಸಿದ್ಧರಾಜು ರಾತ್ರಿಯಿಡೀ ತೋಟವೆಲ್ಲಾ ಸುತ್ತಿ ದನಗಳಿದ್ದೆಡೆಯಲ್ಲೆಲ್ಲ ಕೈಯ್ಯಲ್ಲಿದ್ದ ಬಾಳೆಗೊನೆಯಿಂದ ಹಣ್ಣನ್ನು ಮುರಿಯಣ, ಹಣ್ಣೊಳಗೆ ವಿಷ ತುರುಕಣ, ಅಗ್ಗಾ ಅಗ್ಗಾ ಎಂದು ಕೂಗಿ ಕರಿಯಣ, ತಿಂದ್ ನೆಗುದ್ ಬಿದ್ ಸಾಯ್ರಿ ಎಂದು ಎಸಿಯಣ. ಮೈಮೇಲೆ ರುದ್ರದೇವರ ಗಣ ಬಂದವರಂತೆ ಸುಸ್ತಾಗುವವರೆಗೂ ಇಡೀ ತೋಟದ ತುಂಬಾ ಎಸೆದು ರಾತ್ರೋರಾತ್ರಿ ಬಳ್ಳಾರಿಯಿಂದ ಧರ್ಮಸ್ಥಳಕ್ಕೆ ಹೋಗುತಿದ್ದ ಬಸ್ಸೊಂದನ್ನು ಹತ್ತಿ ಅಲ್ಲೆಲ್ಲೋ ಕಕ್ಕಿಂಜೆಯ ಬಳಿ ಇಳಿದನಂತೆ (ಮುಂದುವರೆಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248